

# ಅಸ್ತಿತ್ವ

■ ಜಯಶ್ರೀ ದೇಶಪಾಂಡೆ
ಕಲೆ: ಗುರು ನಾವಳ್ಳಿ

‘ನಾಳೆ ಸಂಜೆ ಆರು ಗಂಟೆಯಷ್ಟೊತ್ತಿಗೆ...’ ಸರಿಯಾಗಿ ನೆನಪಿಟ್ಟುಕೊಳ್ಳಬೇಕು. ಮರೆಯಲಾರದು ಆದರೂ ಆರು ಗಂಟೆಯೊಳಗಾಗಿ ಎಂದರೆ ಸಮಯವೇ ಸಾಲದು. ಎಷ್ಟೆಲ್ಲ ತಯಾರಿ ಆಗಬೇಕು? ಏನೆಲ್ಲ ಮಾಡಬೇಕು?

ದಮಯಂತಿಯಮ್ಮನ ತುಟಿಗಳಲ್ಲಿ ಮತ್ತೆ ಮತ್ತೆ ಮುಗುಳುನಗೆ, ರಾಜೀವ ಬರುತ್ತಾನೆ, ಶ್ರಾವಣಿ... ಎಲ್ಲಕ್ಕಿಂತ ಹೆಚ್ಚಾಗಿ ಮೋಹಿತ ಬರುತ್ತಿದ್ದಾನೆ! ಮನಸ್ಸು ಹಿಗ್ಗಿನ ಕಡಲಲ್ಲಿ ಮೀಯಿತು. ನೆನೆದು ತಣಿದಿತು. ಚಟ್ಟನೆ ಏಳಬೇಕೆಂದರೆ ಕಾಲುಗಳು ಒಪ್ಪುವುದಿಲ್ಲ, ಸ್ಥೂಲ ಶರೀರಕ್ಕೆ ವಯೋಮಾನದ ಭಾರ. ಆದರೆ ಸಂಭ್ರಮಕ್ಕೆ ನೂರು ಕಾಲುಗಳಂತೆ. ಅದರ ಉಬ್ಬರವನ್ನು ತಡೆಯುವುದಸಾಧ್ಯ. ನಾಲು ವರ್ಷಗಳ ಅನಂತರ ಸಾವಿರ ಸಾವಿರ ಮೈಲಿಗಳ ದೂರದಿಂದ ಹಾರಿ ಬರಲಿರುವ ಮಗಸೊಸೆಮೊಮ್ಮಗನ ಸ್ವಾಗತ ಆಗಬೇಡವೆ? ಇಲ್ಲಿಂದ ಹೋಗುವಾಗ ತಪ್ಪು ಹೆಜ್ಜೆಗಳಿಟ್ಟು ಬಿದ್ದೆದ್ದು ಚಲಿಸುತ್ತಿತ್ತು ಮಗು. ಈಗ?

ನಾಳೆಯೆ ದೀಪಾವಳಿ ಹಬ್ಬ, ರುಕ್ಕಮ್ಮ, ಚನ್ನಪ್ಪ ಒಡತಿಯ ಸಂತಸಕ್ಕೆ ಹೊಸ ಅರ್ಥ ನೀಡುತ್ತ ಹಿಗ್ಗುವರು. ಅನೇಕ ದಿನಗಳ ಅನಂತರ ಒಡತಿ ಹೀಗೆ ನಗುತಿದ್ದಾಳೆ. ಅತೀವ ಸಂತೋಷವಾದರೆ ಇಂಥ ನಗೆ ಅರಳುತ್ತದೆ. ಹಿಗ್ಗು ಹಿಗ್ಗನ್ನು ಬೆಳೆಸುತ್ತದೆ. ಆಜ್ಞೆಗಳು ಸರಸರನೆ ಪಾಲನೆಯಾದವು. ಮನೆಯನ್ನೆಲ್ಲ ಗುಡಿಸಿ ತೊಳೆದು ಶುಚಿ ಮಾಡಿ, ಹೂವಿನ ಬುಟ್ಟಿ, ಎಲೆಗಳ ತೋರಣಗಳು ಬಂದಿಳಿಯಲಿ... ಬಾಗಿಲು ಕಿಟಕಿಗಳೆಲ್ಲ ಅಲಂಕಾರವಾಗಲಿ. ರಾಶಿ ಪಟಾಕಿ ತನ್ನಿ,